# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 01.02.2022ರ ಮಂಗಳವಾರದಂದು ಪೂರ್ವಾಹ್ನ 11–30 ಗಂಟೆಗೆ ಜರುಗಿದ ಸಿಂಡಿಕೇಟ್‌ನ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಕೆ.ಸಿ ವೀರಭದ್ರಯ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ರಮೇಶ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಡಾ. ವೆಂಕಟೇಶಯ್ಯ | ಸದಸ್ಯರು |
| 7. | ಡಾ. ನಾಗರಾಜು | ಸದಸ್ಯರು |
| 8. | ಡಾ. ಬಿ.ರಾಜಣ್ಣ | ಸದಸ್ಯರು |
| 9. | ಡಾ. ಕೆ.ವಿ.ಸುರೇಶ | ಸದಸ್ಯರು |
| 10. | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 14. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 15. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಡಾ. ಸಂಗೀತಾ ಗಜಾನನ ಭಟ್, ಹಣಕಾಸು ಅಧಿಕಾರಿಗಳು | ಸದಸ್ಯರು |
| 17. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಡಾ. ಸೈಯದ್ ಕಾಝು ಮೊಹಿದ್ದೀನ್.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ ಜನಪರವಾಗಿ ಆಲೋಚಿಸುತ್ತಿದ್ದಂತಹ ಹಿರಿಯ ಸಾಹಿತಿಗಳಾದ ಕವಿ, ನಾಟಕಕಾರ, ಕನ್ನಡಪರ ಹೋರಾಟಗಾರ ಡಾ: ಚಂದ್ರಶೇಖರ್ ಪಾಟೀಲ್(ಚಂಪಾ), ಇಂಗ್ಲೀಷ್ ಪ್ರಾಧ್ಯಾಪಕರು ಇವರು ನಿಧನರಾಗಿರುವುದರಿಂದ ಕರುನಾಡಿಗೆ ದೊಡ್ಡ ನಷ್ಟವಾಗಿದೆ ಅವರ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷಗಳ ಕಾಲ ಮೌನಾಚರಣೆಯನ್ನು ಆಚರಿಸಲಾಯಿತು.

ಹೊಸದಾಗಿ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿರುವ ಶ್ರೀ ಕೆ.ವಿ.ಸುರೇಶ್, ಪ್ರಾಂಶುಪಾಲರು, ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು, ಇವರನ್ನು ಸ್ವಾಗತಿಸಿ ಸಭೆಗೆ ಪರಿಚಯಿಸಿದರು.

ಹಾಗೂ ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಡಾ: ವೆಂಕಟೇಶ್ ಜೆ.ಎನ್. ಪ್ರಾಂಶುಪಾಲರು, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **2021/10.4** | ಕು.ಕುಸುಮ ಎ., ಸಂಸ್ಕೃತ ಅಧ್ಯಯನ ವಿಭಾಗದ ಹಳೆಯ ವಿದ್ಯಾರ್ಥಿ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ದೂರಿನ ಕುರಿತು ವಿಚಾರಣೆ ನಡೆಸಿರುವ ವರದಿ ಬಗ್ಗೆ |
| ತೀರ್ಮಾನ | ಕು.ಕುಸುಮ ಎ., ಸಂಸ್ಕೃತ ಅಧ್ಯಯನ ವಿಭಾಗದ ಹಳೆಯ ವಿದ್ಯಾರ್ಥಿ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ದೂರಿನ ಸಂಬಂಧ ದಿನಾಂಕ 30.12.2021ರಂದು ನಡೆದ ಸಿಂಡಿಕೇಟ್ ಸಭೆಯ ನಡವಳಿಯ ವಿಷಯ ಸಂಖ್ಯೆ:2021/10.4ಕ್ಕೆ ತೆಗೆದುಕೊಂಡ "ಮುಂದೂಡಲಾಯಿತು" ಎಂಬ ತೀರ್ಮಾನವನ್ನು "ಈ ಪ್ರಕರಣದ ಕುರಿತು ಕಾನೂನು ಸಲಹೆಗಾರರಿಂದ ಅಭಿಪ್ರಾಯ ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮರುಮಂಡಿಸಲು ತೀರ್ಮಾನಿಸಲಾಯಿತು" ಎಂದು ತಿದ್ದುಪಡಿ ಮಾಡಿರುವುದನ್ನು ಸಭೆಯು ಅನುಮೋದಿಸಿತು. |
| ದಿನಾಂಕ 30.12.2021ರಂದು ಜರುಗಿದ "ಒಂಬತ್ತನೇ ಸಾಮಾನ್ಯ ಸಿಂಡಿಕೇಟಿನ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ | |
| ತೀರ್ಮಾನ | ದಿನಾಂಕ 30.12.2021ರಂದು ಜರುಗಿದ "ಒಂಬತ್ತನೇ ಸಾಮಾನ್ಯ ಸಿಂಡಿಕೇಟಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ದೃಢೀಕರಿಸಲಾಯಿತು. |
| ಸಾಮಾನ್ಯ ಸಭೆ **2022/1.1** | ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಡಾ. ತಿಪ್ಪೇಸ್ವಾಮಿ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10)ರಲ್ಲಿರುವ ಅವಕಾಶದನುಸಾರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಡಾ. ತಿಪ್ಪೇಸ್ವಾಮಿ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ. ಪಿ.ಕೆ. ರಾಜಶೇಖರ ಇವರನ್ನು ವಿವಿ ಆದೇಶ ಸಂಖ್ಯೆ:ಡಿವಿ.7/62/2020-21, ದಿನಾಂಕ: 10.01.2022ರಿಂದ ಮುಂದಿನ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ.20,000/-(ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಗಳ ಗೌರವಧನದೊಂದಿಗೆ ನೇಮಕ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| **ಸಾಮಾನ್ಯ ಸಭೆ 2022/1.2** | ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 53(10)ರಲ್ಲಿರುವ ಅವಕಾಶದನುಸಾರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ.ಚಂದ್ರಶೇಖರಯ್ಯ ಇವರನ್ನು ಮುಂದಿನ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಮಾಹೆಯಾನ ರೂ.25,000/-(ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳ ಗೌರವಧನದೊಂದಿಗೆ ನೇಮಕ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/1.3** | ದಿವಂಗತ ದೇವರಾಜು ಎಸ್. ಸೇವಕ, ಪ್ರಾಚ್ಯಾವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ನಿಯಾದ ಶ್ರೀಮತಿ ಪುಷ್ಪಲತಾ ಕೆ.ಆರ್. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ದೇವರಾಜು ಎಸ್., ಸೇವಕ, ಪ್ರಾಚ್ಯಾವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ನಿಯಾದ ಶ್ರೀಮತಿ ಪುಷ್ಪಲತಾ ಕೆ.ಆರ್. ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀಮತಿ. ಪುಷ್ಪಲತಾ ಕೆ.ಆರ್. ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/1.4** | ಶ್ರೀ ಎ. ಮಂಜೇಶ, ದ್ವಿತೀಯ ದರ್ಜೆ ಗುಮಾಸ್ತರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಇವರ ಕರ್ತವ್ಯದಲ್ಲಿನ ನಿರ್ಲಕ್ಷತೆ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| | ಶ್ರೀ ಎ.ಮಂಜೇಶ, ದ್ವಿತೀಯ ದರ್ಜೆ ಗುಮಾಸ್ತರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಇವರ ನಿರ್ಲಕ್ಷತೆ ಹಾಗೂ ಅಜಾಗರೂಕತೆಯಿಂದಾಗಿ ಪ್ರಸಾರಾಂಗದ ಪುಸ್ತಕ ಮಾರಾಟ ಮಳಿಗೆಯಲ್ಲಿ ರೂ.2,53,237/-ಗಳ ಮೌಲ್ಯದ ಪುಸ್ತಕಗಳು ಕಣ್ಮರೆಯಾಗಿರುವ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು, ಇವರ ಈ ನಡತೆಯು ವಿಶ್ವವಿದ್ಯಾನಿಲಯದ ಸಿಸಿಎ ಅಧಿನಿಯಮ 1983ರ ಪ್ರಕಾರ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಆರೋಪಣಾ ಪಟ್ಟಿ ಮತ್ತು ದೋಷಾರೋಪಣ ಪಟ್ಟಿಯನ್ನು ಸಿದ್ದಪಡಿಸಿ ಶಿಸ್ತು ಪ್ರಾಧಿಕಾರದ ದಿನಾಂಕ 25.11.2020ರಂದು ಜರುಗಿದ ಸಿಂಡಿಕೇಟ್ ಸಭೆಯ ಮುಂದೆ ವಿಷಯವನ್ನು ಮಂಡಿಸಲಾಗಿ, ಸಭೆಯು ವಿಚಾರಣಾ ಸಮಿತಿಯನ್ನು ರಚಿಸುವ ಸಲುವಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಿದ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು ಶ್ರೀ.ಹೆಚ್.ಎಸ್.ರಾಮಣ್ಣ, ನಿವೃತ್ತ ನ್ಯಾಯಾಧೀಶರು, ಜಿಲ್ಲಾ ಸೆಷನ್ಸ್ ನ್ಯಾಯಾಲಯ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಶ್ರೀ.ನರೇಂದ್ರ ಕೆ, ಸಹಾಯಕ ಹಣಕಾಸು ಅಧಿಕಾರಿಗಳು, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಈ ವಿಚಾರಣೆಯ ಸಂಬಂಧವಾಗಿ ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಲು ಆದೇಶಿಸಿದ ಹಿನ್ನೆಲೆಯಲ್ಲಿ ದಿನಾಂಕ25.02.2021ರಂದು ಶ್ರೀ.ಹೆಚ್.ಎಸ್.ರಾಮಣ್ಣ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಸದರಿಯವರು ಸುದೀರ್ಘವಾಗಿ ವಿಚಾರಣೆ ನಡೆಸಿ ಇಲಾಖಾ ವಿಚಾರಣೆಯ ಅಂತಿಮ ವರದಿಯನ್ನು ದಿನಾಂಕ 18.10.2021ರಂದು ಕಛೇರಿಗೆ ಸಲ್ಲಿಸಿರುತ್ತಾರೆ. |

| | |
|---|---|
| | ವಿಶ್ವವಿದ್ಯಾನಿಲಯದ ಸಿಸಿಎ ಅಧಿನಿಯಮ 1983ರ ಅನ್ವಯ ಆಪಾದಿತರಿಗೆ ವಿಚಾರಣಾಧಿಕಾರಿಯು ಸಲ್ಲಿಸಿರುವ ವರದಿಯನ್ನು ರವಾನಿಸಿ, ಸದರಿ ವರದಿಯ ಕುರಿತು ತಮ್ಮ ಲಿಖಿತ ಹೇಳಿಕೆ/ಪ್ರತಿರಕ್ಷಣೆ ಏನಾದರೂ ಇದ್ದಲ್ಲಿ ಸಲ್ಲಿಸುವಂತೆ ತಿಳಿಸಿ, ಆಪಾದಿತರಿಗೆ ವಿಚಾರಣಾ ವರದಿಯನ್ನು ಕಾರಣ ಕೇಳುವ ನೋಟೀಸ್ ಮೂಲಕ ರವಾನಿಸಲಾಯಿತು. ಪ್ರಸ್ತುತ ಆಪಾದಿತರಾದ ಶ್ರೀ.ಎ.ಮಂಜೇಶ ಇವರು ತಮ್ಮ ಲಿಖಿತ ಹೇಳಿಕೆಯನ್ನು ದಿನಾಂಕ 27.12.2021ರಂದು ಈ ಕಛೇರಿಗೆ ಸಲ್ಲಿಸಿರುತ್ತಾರೆ.<br><br>ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಬೆಂಗಳೂರು ಇವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಸಿಆಸುಇ 18ನೇ ಇವಿ 2001, ದಿನಾಂಕ 14.09.2021ರ ಅನ್ವಯ ಸರ್ಕಾರಿ ನೌಕರನ ವಿರುದ್ದ ಹೂಡಲಾದ ಇಲಾಖಾ ವಿಚಾರಣೆಯಲ್ಲಿ ನೌಕರನ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ವಿಧಿಸಬಹುದಾದ ದಂಡನೆಗಳ ಕುರಿತು ವಿವರವಾದ ಮಾಹಿತಿಯನ್ನು ಲಗತ್ತಿಸಿ ಕಳುಹಿಸಿದ್ದಾರೆ.<br>ಪ್ರೊ.ರಮೇಶ್‌ರವರು ಮಾತನಾಡಿ, ಶಿಕ್ಷೆ ನೀಡುವ ವಿಚಾರವನ್ನು ಮಾನ್ಯ ಅಧ್ಯಕ್ಷರಿಗೆ ವಹಿಸುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.<br><br>ಶ್ರೀ.ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಮುಂದಿನ ದಿನಗಳಲ್ಲಿ ಇಂತಹ ಕೃತ್ಯಗಳಲ್ಲಿ ತೊಡಗುವಂತಹ ನೌಕರರುಗಳಿಗೆ ಸದರಿ ನೌಕರರಿಗೆ ನೀಡುವಂತಹ ಶಿಕ್ಷೆ ಮಾದರಿಯಾಗಿರುವಂತೆ ನಿರ್ಣಯ ಕೈಗೊಳ್ಳುವುದು ಉತ್ತಮ ಎಂದು ತಮ್ಮ ಅಭಿಪ್ರಾಯವನ್ನು ಸಭೆಗೆ ತಿಳಿಸಿದರು. |
| ತೀರ್ಮಾನ | ಶ್ರೀ.ಎ.ಮಂಜೇಶ, ದ್ವಿತೀಯ ದರ್ಜೆ ಗುಮಾಸ್ತರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಇವರ ನಿರ್ಲಕ್ಷತೆ ಹಾಗೂ ಅಜಾಗರೂಕತೆಯಿಂದಾಗಿ ಪ್ರಸಾರಾಂಗದ ಪುಸ್ತಕ ಮಾರಾಟ ಮಳಿಗೆಯಲ್ಲಿ ರೂ.2,53,237/- ಗಳ ಮೌಲ್ಯದ ಪುಸ್ತಕಗಳು ಕಣ್ಮರೆಯಾಗಿರುವ ಹಿನ್ನಲೆಯಲ್ಲಿ, ವಿಶ್ವವಿದ್ಯಾನಿಲಯದ ಸಿಸಿಎ ಅಧಿನಿಯಮ 1983ರ ಪ್ರಕಾರ ಇವರ ವಿರುದ್ದ ಆರೋಪವು ಸಾಬೀತಾದ ಹಿನ್ನೆಲೆಯಲ್ಲಿ ಮುಂದಿನ ವಾರ್ಷಿಕ ಬಡ್ತಿಗಳಿಗೆ ತೊಂದರೆಯಾಗದಂತೆ ಐದು ವೇತನ ಬಡ್ತಿಗಳನ್ನು ಕಡಿತಗೊಳಿಸುವುದು ಹಾಗೂ ರೂ.2.53,237/-ಗಳನ್ನು ಐದು ಸಮಾನ ಕಂತುಗಳಲ್ಲಿ ಐದು ತಿಂಗಳ ಒಳಗಾಗಿ ವಿಶ್ವವಿದ್ಯಾನಿಲಯಕ್ಕೆ ಪಾವತಿ ಮಾಡಬೇಕೆಂದು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/1.5 | MYCAS College of Professional Studies, ಮೇಟಗಳ್ಳಿ, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Com. (Financial Management) ಕೋರ್ಸ್‌ನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | MYCAS College of Professional Studies, ಮೇಟಗಳ್ಳಿ, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ B.Com. (Financial Management) ಕೋರ್ಸ್‌ನ್ನು ಪ್ರಾರಂಭಿಸಲು 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/1.6 | ICARE School of Research and Development, ಮಾರೇನಹಳ್ಳಿ ಮುಖ್ಯರಸ್ತೆ, ಬಾಗಲೂರು, ಬೆಂಗಳೂರು, ಇವರು ಈಗಾಗಲೇ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ Biochemistry, Law, Education, English ಮತ್ತು Food Science and Nutrition ವಿಷಯಗಳಲ್ಲಿ ಸಂಶೋಧನಾ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |

| | |
|---|---|
| ಸಾಮಾನ್ಯ ಸಭೆ 2022/1.7 | ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ದೂರುಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯು ಸಲ್ಲಿಸಿರುವ ವರದಿಯನ್ನು ಮಂಡಿಸುತ್ತಿರುವ ಬಗ್ಗೆ. |
| | ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ದೂರು ಪರಿಶೀಲನ ಸಮಿತಿಯು ಶ್ರೀ.ಹೆಚ್.ಎಸ್.ರಾಮಣ್ಣರವರ ಅಧ್ಯಕ್ಷತೆಯಲ್ಲಿ ಸುಮಾರು ಒಂದು ವರ್ಷಗಳ ಕಾಲ ನಡೆಯಿತು ಆದರೂ ಯಾರು ಕೂಡ ಸರಿಯಾದ ಮಾಹಿತಿಯನ್ನು ನೀಡಲು ವಿಫಲರಾಗಿರುತ್ತಾರೆ ಎಂದು ಕುಲಸಚಿವರು (ಪರೀಕ್ಷಾಂಗ), ಮತ್ತು ಶ್ರೀ.ಎಸ್.ಡಿ.ದೊಡ್ಡಚಾರಿ ಸಭೆಯಲ್ಲಿ ತಿಳಿಸಿದರು.<br>ಸಮಿತಿಯು ನೀಡಿರುವ ವರದಿಯು ಈ ಕೆಳಕಂಡಂತಿದೆ.<br>• It becomes clear from the above that the relationship of permanent faculty and guest faculty to be improved by the intervention of the University and permanent faculty to be advised to intervene in the matter whenever a situation like the above arises and resolve the differences between the students and the guest faculty.<br>• The faculty is strictly instructed not to lodge any complaint against anybody in relation to the official matter without the approval of the University authorities.<br>• The University may think of holding an assessment of the work of the guest faculty once in three months.<br>• The University authorities should endeavour to see that the permanent faculty should not misuse their power to exploit the guest faculty as well as the students of the Department.<br>• The University authorities may think of issuing show cause notice to the permanent faculty who gave the statement before the committee by saying that they do not know who has written the resolution of the Department Council Meeting.<br>• The guest faculty may be strictly instructed not to interfere in the personal matter of any student in the class. Their focus should be on imparting quality knowledge to students instead of engaging in rumours. |
| ತೀರ್ಮಾನ | ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಅತಿಥಿ ಉಪನ್ಯಾಸಕರುಗಳು ಸಲ್ಲಿಸಿರುವ ದೂರುಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯ ವರದಿಯನ್ನು ಪರಿಶೀಲಸಿದ ಸಭೆಯು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ತಾತ್ಕಾಲಿಕ ಹಾಗೂ ಖಾಯಂ ಪ್ರಾಧ್ಯಾಪಕ/ಅಧ್ಯಾಪಕೇತರ ನೌಕರರುಗಳಿಗೆ ಮತ್ತು ಅತಿಥಿ ಉಪನ್ಯಾಸಕರುಗಳಿಗೆ ಇಂತಹ ಘಟನೆಗಳು ಮತ್ತೊಮ್ಮೆ ಮರುಕಳಿಸಿದರೆ ತೀಕ್ಷ್ಣವಾದ ಕ್ರಮ ಕೈಗೊಳ್ಳುವುದಾಗಿ ತಿಳಿಸಿ ಎಚ್ಚರಿಕೆಯ ಸೂಚನೆಯನ್ನು (Warning Notice) ನೀಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. |

| | |
|---|---|
| **ಸಾಮಾನ್ಯ ಸಭೆ 2022/1.8** | ಡಾ. ಡ್ಯಾನಿಯಲ್, ಸಹಾಯಕ ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ನಡೆದ 2007ರ ನೇರ ನೇಮಕಾತಿಗಳ ಸಂಬಂಧ ಸರ್ಕಾರದ ನಿರ್ದೇಶನವನ್ನು ನಿರೀಕ್ಷಿಸುತ್ತಿರುವ ಹಾಗೂ ಪ್ಯಾರ(1)ರಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಘನ ಸರ್ಕಾರದ ಪ್ರಕ್ರಿಯೆಗಳ ಅಂಶಗಳನ್ನು ಗಮನಕ್ಕೆ ತರುತ್ತಾ ಡಾ. ಡ್ಯಾನಿಯಲ್, ಸಹಾಯಕ ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸಹಾಯಕ ಪ್ರಾಧ್ಯಾಪಕ AGP 6000 ದಿಂದ AGP 7000 ಹಂತಕ್ಕೆ CAS ಅಡಿಯಲ್ಲಿ ಪದೋನ್ನತಿ ನೀಡಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/1.9** | ಡಾ. ಎಸ್. ಇಂದುಮತಿ, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ತಡೆಹಿಡಿದಿರುವ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆ ಮಾಡುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಡಾ.ಎಸ್.ಇಂದುಮತಿ, ನಿವೃತ್ತ ಪ್ರಾಧ್ಯಾಪಕರು ಇವರು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಯಾದ ಸಂದರ್ಭದಲ್ಲಿ ಅಧಿಕಾರ ದುರುಪಯೋಗ ಹಾಗೂ ನಿಧಿಯ ದುರ್ಬಳಕೆಗಳ ಬಗ್ಗೆ ಆರೋಪ ಇರುವುದರಿಂದ ಪಿಂಚಣಿಯನ್ನು ತಡೆಹಿಡಿಯುವಂತೆ ಶ್ರೀ ಪಿ.ನಿರಂಜನ ಮೂರ್ತಿ, ವಕೀಲರು ಇವರು ದಿನಾಂಕ 16.02.2021ರಂದು ಕರ್ನಾಟಕ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆದಿರುತ್ತಾರೆ. ಈ ಸಂಬಂಧ ಅವರ ಪಿಂಚಣಿ ಸೌಲಭ್ಯವನ್ನು ತಡೆಹಿಡಿಯಲಾಗಿದೆ ಎಂದು ತಿಳಿಸಿದರು ಹಾಗೂ ಈ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಕೋರಲಾಗಿ ಈ ಮುಂದಿನಂತೆ ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ.<br><br>The entire issue may be placed before the Syndicate and if in case the syndicate decisions stands affirmative, the University may take an undertaking with respect to the pending enquiry and the benefits of Dr.S.Indumathi be thereafter released without prejudice to the right of University of Mysore in the said matter.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಕೆಸಿಎಸ್ಆರ್ ನಿಯಮ 214 (ಎ) ಇದರನ್ವಯ ಗ್ರಾಚ್ಯುಟಿ (Gratuity) ಹಣವನ್ನು ತನಿಖೆ ಪೂರ್ಣವಾದ ನಂತರ ಮಾತ್ರ ಪಾವತಿಸತಕ್ಕದ್ದು ಹಾಗೂ ಕೆಸಿಎಸ್ಆರ್ ನಿಯಮ 276(7) ಅನ್ವಯ ತನಿಖೆ ಪೂರ್ಣವಾಗುವವರೆಗೆ ಪ್ರಾವಿಷನಲ್ ಪಿಂಚಣಿಯನ್ನು ಪಾವತಿಸತಕ್ಕದ್ದು ಎಂಬ ನಿಯಮವಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಡಾ.ಎಸ್.ಇಂದುಮತಿ, ನಿವೃತ್ತ ಪ್ರಾಧ್ಯಾಪಕರು ಇವರ ವಿರುದ್ಧ ಇದುವರೆವಿಗೂ ಯಾವುದೇ ತನಿಖಾ ವಿಚಾರಣೆಗಳು ನಡೆದಿರುವ ಮಾಹಿತಿಗಳು ಇಲ್ಲದಿರುವುದರಿಂದ ಇವರಿಗೆ ತಡೆಹಿಡಿಯಲಾಗಿರುವ ಎಲ್ಲಾ ಪಿಂಚಣಿಯ ಸೌಲಭ್ಯಗಳನ್ನು ನೀಡಬಹುದಾಗಿದೆ ಎಂದು ಸಭೆಗೆ ತಿಳಿಸಿದರು. |
| **ತೀರ್ಮಾನ** | ಡಾ. ಎಸ್. ಇಂದುಮತಿ, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ತಡೆಹಿಡಿದಿರುವ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಸದರಿಯವರಿಂದ ಒಂದು ಮುಚ್ಚಳಿಕೆಯನ್ನು ಬರೆಸಿಕೊಂಡು ಬಿಡುಗಡೆ ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2022/1.10 | NCC Generic Elective (UG) ವಿಷಯದಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ – ಅನುಸಮರ್ಥನೆಗಾಗಿ. |
| ತೀರ್ಮಾನ | ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ NCC Generic Elective (UG) ವಿಷಯದಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ 18.11.2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/1.11 | ಸಾರ್ವಜನಿಕ ಆಡಳಿತ ಅಧ್ಯಯನ ಮಂಡಳಿ (UG)ಯನ್ನು ಪುನರ್‌ರಚಿಸಿರುವ ಬಗ್ಗೆ- ಅನುಸಮರ್ಥನೆಗಾಗಿ. |
| ತೀರ್ಮಾನ | ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಸಾರ್ವಜನಿಕ ಆಡಳಿತ ಅಧ್ಯಯನ ಮಂಡಳಿ (UG)ಯನ್ನು ಪುನರ್‌ರಚಿಸಿ ದಿನಾಂಕ 23.11.2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/1.12 | ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಡಾ:ಎಸ್.ಎಸ್.ಶಾರದ, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 19.03.2020ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 18.03.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಅಮೃತೇಶ್ ಕೆ.ಎನ್. ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 19.03.2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/1.13 | ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಡಾ: ಕೆ.ಬಿ.ಪ್ರವೀಣ, ಸಹಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 01.03.2020ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಈ ಅಧ್ಯಕ್ಷರ ಅವಧಿಯು ದಿನಾಂಕ 28.02.2022ಕ್ಕೆ ಮುಕ್ತಾಯಗೊಳ್ಳುವುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಪುಷ್ಪ ಎಂ. ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 01.03.2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/1.14 | Specialized Programme ಅಡಿಯಲ್ಲಿ B.Sc. (Hons.) in Agriculture, B.Sc. (Hons.) in Horticulture ವಿಷಯಗಳಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ- ಅನುಸಮರ್ಥನೆಗಾಗಿ. |
| ತೀರ್ಮಾನ | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, B.Sc. (Hons.) in Agriculture, B.Sc. (Hons.) in Horticulture ವಿಷಯಗಳಲ್ಲಿ |

| | |
|---|---|
| | ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ 30.12.2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/1.15** | ESDM (Earth Science and Disaster Management) (PG) ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ESDM (Earth Science and Disaster Management) (PG) ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸಿ ದಿನಾಂಕ 06.01.2022ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/1.16** | Diploma in Fire and Personal Safety, Diploma in Hospital and Health Care Management, Diploma in Bussiness Administration ಕೋರ್ಸ್‌ಗಳಿಗೆ Specialized Programme ಅಡಿಯಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| | ಡಾ.ಚೈತ್ರನಾರಾಯಣ್ ರವರು ಮಾತನಾಡಿ, ಆನ್‌ಲೈನ್ ಮುಖಾಂತರ ಸಲ್ಲಿಸಿದ ಅಧ್ಯಯನ ಮಂಡಳಿಯ ವಿವರಗಳನ್ನು ಪರಿಶೀಲಿಸಲಾಗಿದೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ವೈಯಕ್ತಿಕವಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಬೇಕು ಎಂಬುದಾಗಿ ಸಭೆಯಲ್ಲಿ ತಿಳಿಸಿದರು. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ Diploma in Fire and Personal Safety, Diploma in Hospital and Health Care Management, Diploma in Bussiness Administration ಕೋರ್ಸ್‌ಗಳಿಗೆ Specialized Programme ಅಡಿಯಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ 22.12.2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/1.17** | M.Sc. (Child and Adolescent Psychology), M.Sc. (Dementia and Geriatric Psychology, Diploma in De-addiction and Rehabilitation ಕೋರ್ಸ್‌ಗಳಿಗೆ Specialized Programme ಅಡಿಯಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ M.Sc. (Child and Adolescent Psychology), M.Sc. (Dementia and Geriatric Psychology, Diploma in De-addiction and Rehabilitation ಕೋರ್ಸ್‌ಗಳಿಗೆ Specialized Programme ಅಡಿಯಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ 22.12.2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/1.18** | Certificate Course in Data Science, Certificate Course in Machine Learning with Python Programming, Certificate Course in Digital Health ಕೋರ್ಸ್‌ಗಳಿಗೆ Specialized Programme ಅಡಿಯಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ Certificate Course in Data Science, Certificate Course in Machine Learning |

| | |
|---|---|
| | with Python Programming, Certificate Course in Digital Health ಕೋರ್ಸ್‌ಗಳಿಗೆ Specialized Programme ಅಡಿಯಲ್ಲಿ ಹೊಸದಾಗಿ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ 24.11.2021ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/1.19 | B.Sc. (Jewellery Design and Management) ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ. |
| ತೀರ್ಮಾನ | Principal, VOGUE Institute of Fashion Technology, Koppa, ಇವರಿಗೆ Specialized Programme ನ ಅಡಿಯಲ್ಲಿ B.Sc. (Jewellery Design and Management) ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ 07.01.2016ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಅಧ್ಯಯನ ಮಂಡಳಿಯ ಮೂರು ವರ್ಷಗಳ ಅವಧಿಯು ದಿನಾಂಕ 06.01.2019ಕ್ಕೆ ಅಂತ್ಯಗೊಂಡಿರುತ್ತದೆ. ಮೇಲ್ಕಂಡ ಸಂಸ್ಥೆಯವರು ಸದರಿ ಕೋರ್ಸ್‌ಗೆ 2021–22ನೇ ಸಾಲಿನಲ್ಲಿ 05 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುವುದರಿಂದ ನಿಯಮಾನುಸಾರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿ ಕೊಡಬೇಕೆಂದು ಕೋರಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/1.20 | ವಿಶೇಷ ಚೇತನ ಸಂಶೋಧಕರಿಗೆ ಸಂಶೋಧನಾ ಶುಲ್ಕದಲ್ಲಿ ವಿನಾಯಿತಿ ಕೋರಿ. |
| | ಡಾ. ಚೈತ್ರನಾರಾಯಣ್ ರವರು ಮಾತನಾಡಿ, ವಿಶೇಷ ಚೇತನ ಸಂಶೋಧಕರಿಗೆ ಸಂಶೋಧನಾ ಶುಲ್ಕ, ಮೆಸ್ ಬಿಲ್ ಎಲ್ಲಾ ಶುಲ್ಕಗಳಲ್ಲಿ ವಿನಾಯಿತಿ ನೀಡಬೇಕೆಂದು ಸಭೆಯಲ್ಲಿ ಕೋರಿದರು.<br><br>ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ, ಶಿಷ್ಯವೇತನ ಪಡೆಯುತ್ತಿರುವ ವಿಶೇಷ ಚೇತನ ಸಂಶೋಧಕರುಗಳಿಗೆ ಶಿಷ್ಯವೇತನ ಬರುತ್ತಿರುವುದರಿಂದ ಅಂತಹ ಸಂಶೋಧಕರುಗಳಿಂದ ಶುಲ್ಕ ಪಾವತಿ ಮಾಡಿಸಿಕೊಳ್ಳಲಾಗುತ್ತದೆಂದು ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಚೇತನ ಸಂಶೋಧಕರಿಗೆ ಮತ್ತು ಶಿಷ್ಯವೇತನ ಪಡೆಯುತ್ತಿರುವ ವಿಶೇಷ ಚೇತನ ಸಂಶೋಧಕರಿಗೂ ಸಹ ಸಂಶೋಧನಾ ಶುಲ್ಕದಲ್ಲಿ ವಿನಾಯಿತಿ ನೀಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/1.21 | ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ಬೋಧನಾ ಕಾರ್ಯಭಾರ ಹಂಚಿಕೆಯ ಬಗ್ಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಘಟಕ/ಸ್ವಾಯತ್ತ ಕಾಲೇಜುಗಳು/ಸ್ನಾತಕೋತ್ತ ಕೇಂದ್ರಗಳು/ ಸಂಸ್ಥೆಗಳು/ ಅಧ್ಯಯನ ವಿಭಾಗಗಳ ವಿಷಯವಾರು ಲಭ್ಯವಿರುವ ಕಾರ್ಯಭಾರದಲ್ಲಿ ಖಾಯಂ ಅಧ್ಯಾಪಕರಿಗೆ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಹಂಚಿಕೆ ಮಾಡಿ, ಹೆಚ್ಚುವರಿ ಕಾರ್ಯಭಾರದ ಮಾಹಿತಿಯನ್ನು ಆಯಾಯ ವಿಭಾಗದ ಮುಖ್ಯಸ್ಥರುಗಳು ನೀಡುವ ವಿಷಯವಾರುಗಳ ಹೆಚ್ಚುವರಿ ಕಾರ್ಯಭಾರದ ಆಧಾರದ ಮೇಲೆ ಪತ್ರಿಕಾ ಪ್ರಕಟಣೆಯನ್ನು ನೀಡಿ ಅರ್ಹತೆ/ಸೇವಾ ಅನುಭವದ ಆಧಾರದ ಮೇಲೆ ವಿಷಯವಾರು ವಾಕ್–ಇನ್–ಇಂಟರ್‌ವ್ಯೂವ್ ಮೂಲಕ ಸಂದರ್ಶನವನ್ನು ನಡೆಸಿ 04, 08, ಮತ್ತು ಗರಿಷ್ಠ 12 ಗಂಟೆಗಳ ಕಾರ್ಯಭಾರಕ್ಕೆ ಸಂಭಾವನೆ ಆಧಾರದ ಮೇಲೆ ಅತಿಥಿ ಉಪನ್ಯಾಸಕರುಗಳನ್ನು ಸಿಂಡಿಕೇಟ್ ಸಭೆಯ ತೀರ್ಮಾನದ ಮೇರೆಗೆ ಆಹ್ವಾನಿಸುವ ಪ್ರಕ್ರಿಯೆಗಳನ್ನು ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸಲಾಗುತ್ತಿತ್ತು. ಕೆಲವೊಂದು ವಿಷಯಗಳಲ್ಲಿ ಪಿಹೆಚ್.ಡಿ, ಕೆಸೆಟ್ ಮತ್ತು ನೆಟ್ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಇಲ್ಲದಿದ್ದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ ಹಾಗೂ ಈ ವೆಚ್ಚವನ್ನು ಆಯವ್ಯಯ ಅಂದಾಜುಗಳ "ವೇತನ ಮತ್ತು ಭತ್ಯೆಗಳು" ಖಾತೆಯ "ತಾತ್ಕಾಲಿಕ |

| | |
|---|---|
| | ಅಧ್ಯಾಪಕರ ವೇತನ" (ಕೋಡ್ 228) ಶೀರ್ಷಿಕೆಯಿಂದ ಭರಿಸಲಾಗುತ್ತಿದೆ ಎಂದು ಮಾನ್ಯ ಕುಲಪತಿಗಳು ತಿಳಿಸಿದರು<br>2019-20 ಮತ್ತು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ವಿಶೇಷ ಸಂದರ್ಭವೆಂದು ಪರಿಗಣಿಸಿ ಹಾಗೂ ಸರ್ಕಾರದ ಆದೇಶಾನುಸಾರವಾಗಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರುಗಳನ್ನು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲೂ ಅಂದರೆ 2021-22ನೇ ಸಾಲಿಗೂ ಆಹ್ವಾನಿಸಲಾಗಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್, ಚೈತ್ರನಾರಾಯಣ ಹಾಗೂ ದಾಮೋದರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಯಾರಿಗೆ ಅರ್ಹತೆ ಇರುವುದಿಲ್ಲವೋ ಅವರಿಗೂ ಕೂಡ ಹೆಚ್ಚುವರಿ ಕಾರ್ಯಭಾರ ನೀಡಲಾಗುತ್ತಿದೆ, ಅರ್ಹತೆ ಹೊಂದಿರುವವರಿಗೆ 04, 08, 12 ಗಂಟೆಗಳ ಕಾರ್ಯಭಾರ ನೀಡುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಎಸ್.ಡಿ.ದೊಡ್ಡಾಚಾರಿಯವರು ಮಾತನಾಡಿ, ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿ ಸದರಿಯವರಿಗೆ ಈ ಕೆಳಕಂಡಂತೆ ಷರತ್ತು ವಿಧಿಸಿರುವುದನ್ನು ಸಿಂಡಿಕೇಟ್ ಗಮನಕ್ಕೆ ತಂದರು.<br>"ಅತಿಥಿ ಉಪನ್ಯಾಸಕರುಗಳು ನೇಮಕಾತಿ ವರ್ಷ, ಆಯಾ ವಿಷಯದಲ್ಲಿ ಕನಿಷ್ಠ ಒಂದು ಸಂಶೋಧನಾ ಲೇಖನವನ್ನು SCOPUS ಅಥವಾ Web of Science ನ Journal ಗಳಲ್ಲಿ ಪ್ರಕಟಿಸುವುದು ಮತ್ತು ವಿಶ್ವವಿದ್ಯಾನಿಲಯಕ್ಕೆ ಮಾಹಿತಿಗಾಗಿ ಸಲ್ಲಿಸುವುದು" ಎಂಬ ಸದರಿ ಷರತ್ತನ್ನು ಜಾರಿಗೆ ತರಲು ಕೋರಿದರು. |
| ತೀರ್ಮಾನ | ಮಾನ್ಯ ಕುಲಪತಿಗಳು ಮಾತನಾಡಿ, ಮುಂದಿನ ಶೈಕ್ಷಣಿಕ ಸಾಲಿನಿಂದ ಕಾಲೇಜು/ ಕೇಂದ್ರಗಳು/ ಸಂಸ್ಥೆಗಳು/ಅಧ್ಯಯನ ವಿಭಾಗಗಳು/ಘಟಕ/ಸ್ವಾಯತ್ತ ಕಾಲೇಜುಗಳ ವರ್ಷದ ಕಾರ್ಯಭಾರದ ಮಾಹಿತಿಯನ್ನು ಪಡೆದು ಲಭ್ಯವಾಗುವ ಹೆಚ್ಚುವರಿ ಬೋಧನಾ ಕಾರ್ಯಕ್ಕೆ ಪತ್ರಿಕಾ ಪ್ರಕಟಣೆಯನ್ನು ನೀಡಿ ಅರ್ಹತೆ/ಸೇವಾ ಅನುಭವದ ಆಧಾರದ ಮೇಲೆ ವಿಷಯವಾರು ವಾಕ್-ಇನ್-ಇಂಟರ್‌ವ್ಯೂನ ಮೂಲಕ ಸಂದರ್ಶನವನ್ನು ನಡೆಸಿ ಗರಿಷ್ಠ 8 ರಿಂದ 12 ಗಂಟೆಗಳ ಕಾರ್ಯಭಾರ ನೀಡಿದರೆ ಅತಿಥಿ ಉಪನ್ಯಾಸಕರುಗಳಿಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು ಇದಕ್ಕೆ ಎಲ್ಲಾ ಸಿಂಡಿಕೇಟ್ ಸದಸ್ಯರು ಒಪ್ಪಿಗೆಯನ್ನು ಸೂಚಿಸಿದರು. |
| ಸಾಮಾನ್ಯ ಸಭೆ 2022/1.22 | ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇಲ್ಲಿ ಸ್ಥಾಪಿಸಿರುವ ಪುತ್ಥಳಿಗೆ ಅಕ್ರಮವಾಗಿ ಹಣ ಸಂಗ್ರಹಣೆ ಮಾಡಿರುವ ಆರೋಪದ ಬಗ್ಗೆ. |
| | ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರದಲ್ಲಿ ಅಂಬೇಡ್ಕರ್‌ರವರ ಪುತ್ಥಳಿಗೆ ಅಕ್ರಮವಾಗಿ ಹಣ ಸಂಗ್ರಹಿಸಲಾಗಿದೆ ಎಂಬ ವಿಷಯದ ಬಗ್ಗೆ ಸತ್ಯಾಸತ್ಯತೆಗಳನ್ನು ತಿಳಿಯಲು ಪ್ರೊ.ರಮೇಶ್‌ರವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು, ಆ ಸಮಿತಿಯು ಹೆಚ್ಚಿನ ತನಿಖೆಗೆ ಆಗ್ರಹಿಸಿ ವರದಿ ನೀಡಲಾಗಿದೆ. ಆದರೆ ಪ್ರೊ.ಶಿವಬಸವಯ್ಯರವರು ಇದೇ ಫೆಬ್ರವರಿ ತಿಂಗಳಿನಲ್ಲಿ ನಿವೃತ್ತರಾಗಲಿರುವುದರಿಂದ ಸ್ನಾತಕೋತ್ತರ ಕೇಂದ್ರದಲ್ಲಿ ನಿರ್ಮಿಸಿರುವ ಪುತ್ಥಳಿಯ ಕೆಳಗೆ ಕೊಡುಗೆ: ಪ್ರೊ. ಶಿವಬಸವಯ್ಯ ಎಂಬ ಪದವನ್ನು ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರು ಹಾಗೂ ಡಾ:ಎಂ.ಎಸ್ ದಾಮೋಧರ, ಸಿಂಡಿಕೇಟ್ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ ಪ್ರೊ.ಶಿವಬಸವಯ್ಯನವರ ಸಮ್ಮುಖದಲ್ಲೆ ತೆಗೆಯಲು ತಿಳಿಸಿದರು ಹಾಗೂ ಪ್ರೊ.ಶಿವಬಸವಯ್ಯನವರು ಹಣ ಸಂಗ್ರಹಣೆ ಮಾಡಿರುವುದಕ್ಕೆ ಸಾಕ್ಷ್ಯಾದಾರಗಳು/ ದಾಖಲೆ ಸಮೇತ ಇದ್ದಲ್ಲಿ ಅವರಿಂದ ಅಷ್ಟು ಹಣವನ್ನು ಡೆಪಾಸಿಟ್ ಹಣವಾಗಿ ಪಡೆದು ನಿವೃತ್ತಿಗೆ ಸಂಬಂಧಪಟ್ಟ NOC ಪತ್ರವನ್ನು ನೀಡಬಹುದು ಎಂದು ಸಭೆಯ ಗಮನಕ್ಕೆ ತಂದರು. |

| | |
|---|---|
| ತೀರ್ಮಾನ | ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರು ಹಾಗೂ ಡಾ:ಎಂ.ಎಸ್ ದಾಮೋಧರ, ಸಿಂಡಿಕೇಟ್ ಸದಸ್ಯರು ಇವರ ಸಮ್ಮುಖದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರು ಪುತ್ಥಳಿ ಕೆಳಭಾಗದಲ್ಲಿ "ಕೊಡುಗೆ ಪ್ರೊ. ಶಿವಬಸವಯ್ಯ," ಎಂಬ ಪದವನ್ನು ಸದರಿಯವರು ನಿವೃತ್ತಿಯಾಗುವ ಮೊದಲೇ ತೆಗೆದು ಹಾಕುವಂತೆ ತೀರ್ಮಾನಿಸಲಾಯಿತು ಹಾಗೂ ಪ್ರೊ. ಶಿವಬಸವಯ್ಯನವರು ಹಣ ಸಂಗ್ರಹಣೆ ಮಾಡಿರುವುದಕ್ಕೆ ಸಾಕ್ಷ್ಯಾಧಾರಗಳು/ ದಾಖಲೆ ಸಮೇತ ಇದ್ದಲ್ಲಿ ಅವರಿಂದ ಅಷ್ಟು ಹಣವನ್ನು ಡೆಪಾಸಿಟ್ ಹಣವಾಗಿ ಪಡೆದು ನಿವೃತ್ತಿಗೆ ಸಂಬಂಧಪಟ್ಟ NOC ಪತ್ರವನ್ನು ನೀಡಬಹುದೆಂದು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/1.23** | ಡಾ. ಮೋಕ್ಷಪತಿ ಎಸ್. ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಜನ್ಮ ದಿನಾಂಕದ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| **ಸಾಮಾನ್ಯ ಸಭೆ 2022/1.24** | ಡಾ. ಎಸ್.ಎಸ್. ಮಾಲಿನಿ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಜೆನೆಟಿಕ್ಸ್ ಮತ್ತು ಜೆನೆಮಿಕ್ಸ್ ಅಧ್ಯಯನ ವಿಭಾಗಕ್ಕೆ 05 ವರ್ಷಗಳ ಅವಧಿಗೆ ನಿಯೋಜನೆ ಮೇಲೆ ಕಳುಹಿಸುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಜೆನೆಟಿಕ್ಸ್ ಅಧ್ಯಯನ ವಿಭಾಗದಲ್ಲಿ ಖಾಯಂ ಬೋಧಕರು ಇಲ್ಲದಿರುವುದರಿಂದ ಡಾ. ಎಸ್.ಎಸ್. ಮಾಲಿನಿ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಜೆನೆಟಿಕ್ಸ್ ಮತ್ತು ಜೆನೆಮಿಕ್ಸ್ ಅಧ್ಯಯನ ವಿಭಾಗಕ್ಕೆ 05 ವರ್ಷಗಳ ಅವಧಿಗೆ ನಿಯೋಜನೆ ಮಾಡಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/1.25** | Meta-I Technologies ಸಂಸ್ಥೆರವರಿಂದ ಫಲಿತಾಂಶ ವಿಳಂಬ ಹಾಗೂ Atom Technologies ಸಂಸ್ಥೆ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ತಾಂತ್ರಿಕ ಸಮಸ್ಯೆಯ ಬಗ್ಗೆ. |
| | ಸದರಿ ವಿಷಯವನ್ನು ಶ್ರೀ ಎಸ್.ಡಿ.ದೊಡ್ಡಾಚಾರಿಯವರು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಯಾಗಿ ಕುಲಸಚಿವರು (ಪರೀಕ್ಷಾಂಗ) ರವರು ಮಾತನಾಡಿ, Meta-I Technologies ಸಂಸ್ಥೆಯವರಿಂದ ಪರೀಕ್ಷಾ ಫಲಿತಾಂಶ ನೀಡುವುದಕ್ಕೆ ವಿಳಂಬವಾಗುತ್ತಿದೆ ಮತ್ತು ಪರೀಕ್ಷಾ ಫಲಿತಾಂಶದಲ್ಲಿ ಉತ್ತೀರ್ಣರಾಗಿರುವವರನ್ನು ಅನುತ್ತೀರ್ಣ ಎಂದು ಅನುತ್ತೀರ್ಣರಾದವರನ್ನು ಉತ್ತೀರ್ಣ ಎಂದು ಫಲಿತಾಂಶ ತಪ್ಪು ತಪ್ಪಾಗಿ ಪ್ರಕಟಿಸುತ್ತಿದ್ದಾರೆ. Meta-! Technologies ಸಂಸ್ಥೆಯವರಿಗೆ ಇದರ ಬಗ್ಗೆ ಸಾಕಷ್ಟು ಭಾರಿ ತಿಳಿಸಿದರೂ ಕೂಡ ತಪ್ಪುಗಳು ಮರುಕಳಿಸುತ್ತಲೇ ಇದೆ. ಈ ಸಂಬಂಧ ನಾವು ಅವರಿಗೆ ದಂಡವನ್ನು ಸಹ ವಿಧಿಸಿರುತ್ತೇವೆ. ಇವರು ನೀಡುವ ಪರೀಕ್ಷಾ ಫಲಿತಾಂಶ ತಡವಾಗಿರುವುದರಿಂದ 2021–22ನೇ ಸಾಲಿನ ಸ್ನಾತಕೋತ್ತರ ಪ್ರವೇಶಾತಿಯ ಮೇಲೆ ಗಂಭೀರ ಪರಿಣಾಮ ಬೀರಿದೆ ಎಂದರು.<br><br>ಇನ್ನೂ Atom Technologies ಸಂಸ್ಥೆಯವರು ಸ್ನಾತಕೊತ್ತರ ಕೋರ್ಸ್‌ಗಳ ಪ್ರವೇಶಾತಿ ಮಾಡುವ ಸಮಯದಲ್ಲಿ ತಾಂತ್ರಿಕ ದೋಷ ಎಂದು ಹೆಚ್ಚುವರಿಯಾಗಿ ಸಮಯ ತೆಗೆದುಕೊಳ್ಳುತ್ತಾರೆ ಇದರಿಂದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಹೆಚ್ಚು ತೊಂದರೆಯಾಗುತ್ತಿದೆ ಹಾಗೂ ಈ ಎಲ್ಲಾ ಸಮಸ್ಯೆಗಳನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತಂದಿರುತ್ತೇನೆ ಹಾಗೂ ಸಮಸ್ಯೆಗಳನ್ನು ತಡೆಯಲು ಈ ಎರಡು ಸಂಸ್ಥೆಗಳ ಹೊರಗುತ್ತಿಗೆಯನ್ನು ರದ್ದುಪಡಿಸಿ, ವಿಶ್ವವಿದ್ಯಾನಿಲಯದಿಂದಲೇ ಬೇಕಾಗುವ ಉಪಕರಣಗಳನ್ನು ಖರೀದಿಸಿ ಮುಂಬರುವ ಸೆಮಿಸ್ಟರ್‌ನಿಂದ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವತಿಯಿಂದಲೆ ಫಲಿತಾಂಶಗಳಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಮಾನ್ಯ ಕುಲಪತಿಗಳಲ್ಲಿ ಚರ್ಚಿಸಿದ್ದೇನೆ ಎಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, ಈ ಎರಡೂ ಹೊರಗುತ್ತಿಗೆ ಸಂಸ್ಥೆಯನ್ನು ರದ್ದುಪಡಿಸಿ, ಸರ್ಕಾರ ತಯಾರು ಮಾಡಿರುವ Software ಅನ್ನು ಬಳಸಿಕೊಂಡು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕುಲಸಚಿವರು (ಪರೀಕ್ಷಾಂಗ)ರವರು ನೀಡಿರುವ ಸಲಹೆಗಳನ್ನು ಪರಿಗಣಿಸಿ ಮುಂದಿನ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವತಿಯಿಂದಲೆ ಫಲಿತಾಂಶಗಳಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದಾಗಿ ಸಭೆಗೆ ತಿಳಿಸಿದರು ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆಯನ್ನು ಸೂಚಿಸಿದರು. |
| **ತೀರ್ಮಾನ** | Meta-I Technologies ಸಂಸ್ಥೆರವರಿಂದ ಫಲಿತಾಂಶ ವಿಳಂಬ ಹಾಗೂ Atom Technologies ಸಂಸ್ಥೆ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ತಾಂತ್ರಿಕ ಸಮಸ್ಯೆಗಳು ಉದ್ಭವಿಸಿರುವುದರಿಂದ ಸದರಿ ಸಂಸ್ಥೆಗಳಿಗೆ ನೀಡಿರುವ ಹೊರಗುತ್ತಿಗೆಯನ್ನು ರದ್ದುಪಡಿಸಿ, ಸರ್ಕಾರ ತಯಾರು ಮಾಡಿರುವ Software ಅನ್ನು ಬಳಸಿಕೊಂಡು ಮುಂದಿನ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವತಿಯಿಂದಲೇ ಫಲಿತಾಂಶಗಳಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/1.26** | ಮೈಸೂರು ವಿಶ್ವವಿದ್ಯಾನಿಲಯದ ಸಾಮರ್ಥ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೇವಾಕೇಂದ್ರ (ಸಿಪಿಡಿಪಿಎಸ್) ಮತ್ತು ಇನ್ಸ್‌ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ICSI) ನಡುವೆ ಮಾಡಿಕೊಂಡಿರುವ ಒಡಂಬಡಿಕೆಯ (MoU) ಬಗ್ಗೆ ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಮೈಸೂರು ವಿಶ್ವವಿದ್ಯಾನಿಲಯದ ಸಾಮರ್ಥ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೇವಾಕೇಂದ್ರ (ಸಿಪಿಡಿಪಿಎಸ್) ಮತ್ತು ಇನ್ಸ್‌ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ICSI) ನಡುವೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕೌಶಲ್ಯ ತರಬೇತಿ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಮಾಡಿಕೊಂಡಿರುವ ಒಡಂಬಡಿಕೆಯನ್ನು (MoU) ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/1.27** | 2022–23ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣ, ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ಸಂಯೋಜನೆ ನವೀಕರಣ, ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ, ಶಿಕ್ಷಣ ಕಾಲೇಜುಗಳ ಸಂಯೋಜನೆ ನವೀಕರಿಸಲು ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಕುರಿತು. |
| **ತೀರ್ಮಾನ** | ಮಾನ್ಯ ಕುಲಪತಿಗಳು ಮಾತನಾಡಿ, 2022–23ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣ, ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ಸಂಯೋಜನೆ ನವೀಕರಣ, ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ, ಶಿಕ್ಷಣ |

| | |
|---|---|
| | ಕಾಲೇಜುಗಳ ಸಂಯೋಜನೆ ನವೀಕರಿಸಲು ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಂಬಂಧ 2022-23ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/1.28** | ಡಾ. ಜೆ. ಸಣ್ಣಪ್ಪ, ನಿವೃತ್ತ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಲ್ಲಿಸಿರುವ ಸೇವಾವಧಿಯ ಪಿಂಚಣಿ ಸೌಲಭ್ಯಗಳನ್ನು ವರ್ಗಾವಣೆ ಮಾಡಿರುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಜೆ.ಸಣ್ಣಪ್ಪರವರು ಕುವೆಂಪು ವಿಶ್ವವಿದ್ಯಾನಿಲಯ ಇವರು ದಿನಾಂಕ: 10-09-1992 ರಿಂದ 03-11-2010ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನಲ್ಲಿ ಸಲ್ಲಿಸಿರುವ ಸೇವಾವಧಿಯ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ನಿಯಮಾನುಸಾರ ಬಿಡುಗಡೆಗೊಳಿಸಿರುವುದಾಗಿ ಸಭೆಗೆ ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ ಅಧಿನಿಯಮ 1979ರ ಅನ್ವಯ ಡಾ: ಜೆ.ಸಣ್ಣಪ್ಪ ರವರಿಗೆ ಪಿಂಚಣಿ ಪಾವತಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಜೆ.ಸಣ್ಣಪ್ಪರವರಿಗೆ ಪಿಂಚಣಿ ಪಾವತಿಸುವುದಾದರೆ ನಿಯಮಾನುಸಾರ ಅಧಿನಿಯಮವನ್ನು ತಿದ್ದುಪಡಿ ಮಾಡಿ ರಾಜ್ಯಪಾಲರಿಂದ ಅನುಮೋದನೆ ಪಡೆದುಕೊಂಡು ಮಾಡಬಹುದಾಗಿರುತ್ತದೆ ಎಂಬ ಅಂಶವನ್ನು ಸಹ ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಬೇರೆ ವಿಶ್ವವಿದ್ಯಾನಿಲಯಕ್ಕೆ ಹೋಗುವವರಿಗೆ ಸಂಬಂಧಿಸಿದಂತೆ ಅಧಿನಿಯಮ ತಿದ್ದುಪಡಿ ಮಾಡಲಾಗುವುದು ಎಂದು ತಿಳಿಸಿದರು, |
| **ತೀರ್ಮಾನ** | ಡಾ. ಜೆ. ಸಣ್ಣಪ್ಪ, ನಿವೃತ್ತ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಇವರು ದಿನಾಂಕ:10.09.1992 ರಿಂದ ದಿನಾಂಕ:03.11.2010ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನಲ್ಲಿ ಸಲ್ಲಿಸಿರುವ ಸೇವಾವಧಿಯ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ನಿಯಮಾನುಸಾರ ಬಿಡುಗಡೆಗೊಳಿಸಲು ಸಂಖ್ಯೆ ಇಟಿ12/115/2017-18 ದಿನಾಂಕ 30.10.2021ರ ಮುಖೇನ ಆದೇಶ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/1.29** | ದಿನಾಂಕ : 25-10-2021ರಂದು ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಡೆದ ಸಲಹಾ ಸಮಿತಿಯ ಮೊದಲನೆ ಸಭೆಯ ನಡವಳಿಗೆ ಸಿಂಡಿಕೇಟ್ ಅನುಮೋದನೆಯನ್ನು ಪಡೆಯುವ ಬಗ್ಗೆ. |
| **ತೀರ್ಮಾನ** | ದಿನಾಂಕ : 25-10-2021ರಂದು ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೊದಲನೆ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳಿಗೆ ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/1.30** | ವಿಶೇಷ ಚೇತನ ಸಂಶೋಧಕರಿಗೆ ವಸತಿ ನಿಲಯದಲ್ಲಿ ಉಚಿತವಾಗಿ ಪ್ರವೇಶಾತಿಯನ್ನು ಕಲ್ಪಿಸಿಕೊಡುವುದರ ಬಗ್ಗೆ. |
| **ತೀರ್ಮಾನ** | ವಿಶೇಷ ಚೇತನ ಸಂಶೋಧಕರಿಗೆ ವಸತಿ ನಿಲಯದಲ್ಲಿ ಉಚಿತವಾಗಿ ಪ್ರವೇಶಾತಿಯನ್ನು ನೀಡಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/1.31** | CSIR-ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (CFTRI), ಮೈಸೂರು ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಇವುಗಳ |

| | |
|---|---|
| | ನಡುವೆ ಜಂಟಿ ಸಂಶೋಧನೆ ನಡೆಸಲು ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | CSIR-ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (CFTRI), ಮೈಸೂರು ಸಂಸ್ಥೆಯೊಡನೆ ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರುಗಳು ಜಂಟಿ ಸಂಶೋಧನೆ ನಡೆಸಲು ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/1.32 | ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಜೆ.ಎಸ್.ಎಸ್. ಫಿಜಿಯೋಥೆರಪಿ ಕಾಲೇಜು, ಮೈಸೂರು ಇವುಗಳ ನಡುವೆ ಕ್ರೀಡಾ ಸೌಲಭ್ಯಗಳನ್ನು ಹಾಗೂ ಫಿಜಿಯೋಥೆರಪಿ ಸೌಲಭ್ಯವನ್ನು ಬಳಸಿಕೊಳ್ಳಲು ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಜೆ.ಎಸ್.ಎಸ್. ಫಿಜಿಯೋಥೆರಪಿ ಕಾಲೇಜು, ಮೈಸೂರು ಇವುಗಳ ನಡುವೆ ಕ್ರೀಡಾ ಸೌಲಭ್ಯಗಳನ್ನು ಹಾಗೂ ಫಿಜಿಯೋಥೆರಪಿ ಸೌಲಭ್ಯವನ್ನು ಬಳಸಿಕೊಳ್ಳಲು ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/1.33 | ಶ್ರೀ ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| | ಶ್ರೀ.ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಸಂಬಂಧ ಕೆಸಿಎಸ್ಆರ್ ನಿಯಮಗಳ ಪ್ರಕಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿ.ಸಿ.ಎ ಅಧಿನಿಯಮ 1983ರ ಪ್ರಕಾರ ಶಿಸ್ತು ಕ್ರಮ ಜರುಗಿಸಲು ದಿನಾಂಕ 21.06.2018ರ ಸಿಂಡಿಕೇಟ್ ಸಭೆಯಲ್ಲಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ತೀರ್ಮಾನಿಸಲಾಗಿತ್ತು.<br><br>ಡಾ.ಈ.ಸಿ.ನಿಂಗರಾಜೇಗೌಡ ರವರು ಮಾತನಾಡಿ, ಸದರಿಯವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. |
| ತೀರ್ಮಾನ | ಶ್ರೀ.ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಸಂಬಂಧ ಕೆಸಿಎಸ್ಆರ್ ನಿಯಮಗಳ ಪ್ರಕಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿ.ಸಿ.ಎ ಅಧಿನಿಯಮ 1983ರ ಪ್ರಕಾರ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಆರೋಪಣಾ ಪಟ್ಟಿ ಮತ್ತು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿದ ನಂತರ ಇವರನ್ನು ಕೆಲಸದಿಂದ ವಜಾಗೊಳಿಸಲು ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2022/1.34 | Promotions to University Teachers Under UGC-CAS |
| ತೀರ್ಮಾನ | The recommendations of the Selection Committee in various subjects for promotion of teachers in various disciplines to the next academic level furnished at Annexure-A is approved. Further, the Syndicate has also decided to extend the monetary benefits to the Teachers from the date of the decision of the Syndicate. |

| ಇತರೆ ವಿಷಯಗಳು | |
|---|---|
| 1 | ಡಾ.ಎಂ.ಎಸ್.ದಾಮೋದರ್ ರವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಕರ್ನಾಟಕ ಸರ್ಕಾರದಿಂದ ಹೊರಡಿಸಿರುವ ಕೆಲವೊಂದು ಸುತ್ತೋಲೆಗಳು/ಆದೇಶಗಳು ನಮ್ಮ ಗಮನಕ್ಕೆ ಬರುತ್ತಿಲ್ಲ ಈ ಕಾರಣದಿಂದ ಕುಲಸಚಿವರ ಕಾರ್ಯವೈಖರಿ ಅಸಮಧಾನವಾಗಿದೆ ಎಂದು ತಿಳಿಸಿದರು. ಇದಕ್ಕೆ ಶ್ರೀ.ಎಸ್.ಡಿ.ದೊಡ್ಡಚಾರಿರವರು ಬೇರೆಯವರಿಂದ ನಾವು ತಿಳಿಯುವ ಪರಿಸ್ಥಿತಿ ಬಂದಿದೆ ಎಂದು ಧ್ವನಿಗೂಡಿಸಿದರು.<br><br>ಶ್ರೀ.ಎಂ.ಬಿ.ಗಪ್ಪಣರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ನಿರ್ಣಯವೇ ಅಂತಿಮವಾಗಿರುವುದರಿಂದ ಸಿಂಡಿಕೇಟ್‌ನ ಸದಸ್ಯರಾಗಿ ನಮಗೆ ಕೆಲವೊಂದು ವಿಷಯವು ಸರಿಯಾದ ರೀತಿಯಲ್ಲಿ ತಲುಪುತ್ತಿಲ್ಲವೆಂದು ತಿಳಿಸಿದರು.,<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ ಯಾವ ಆದೇಶ/ಸುತ್ತೋಲೆಗಳು ತಮ್ಮ ಗಮನಕ್ಕೆ ಬಂದಿಲ್ಲ ಎಂದು ತಿಳಿಸಿದರೆ ಸೂಕ್ತ ಉತ್ತರ ನೀಡಬಹುದು ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ಸರ್ಕಾರದಿಂದ ಬರುವ ಯಾವುದೇ ಆದೇಶ/ಸುತ್ತೋಲೆಗಳನ್ನು ಮೊದಲು ಮಾನ್ಯ ಕುಲಪತಿಯವರ ಅವಗಾಹನೆಗೆ ತರಲಾಗುವುದು ಹಾಗೂ ಸಿಂಡಿಕೇಟ್ ಸಭೆಯ ವಿಷಯವನ್ನು ಮಾನ್ಯ ಕುಲಪತಿಗಳ ಅಪ್ಪಣೆ ಮೇರೆಗೆ ಮಂಡಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.<br><br>ಸರ್ಕಾರದ ಎಲ್ಲಾ ಸುತ್ತೋಲೆ/ಆದೇಶ ಪ್ರತಿಗಳನ್ನು ಸಂಬಂಧಿಸಿದವರಿಗೆ ಕೂಡಲೆ ರವಾನಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ನಂತರ ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರಿಗೆ ಯಾವ ಆದೇಶ/ಸುತ್ತೋಲೆಗಳು ಬಂದಿರುವುದಿಲ್ಲ ಎಂಬ ವಿಷಯವನ್ನು ಬರವಣಿಗೆಯಲ್ಲಿ ನೀಡಿದರೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಹಾಗೂ ಮುಂದೆ ಯಾವುದೇ ಆದೇಶ/ಸುತ್ತೋಲೆಗಳು ಸರ್ಕಾರದಿಂದ ಬಂದರೆ ಅದರ ಪ್ರತಿಯನ್ನು ನಿಯಮಾನುಸಾರ ಎಲ್ಲಾ ಸಂಬಧಿಸಿದವರಿಗೆ ತಲುಪಿಸುವಂತೆ ತಿಳಿಸಿದರು. |
| 2 | ಶ್ರೀ ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು/ಅಧ್ಯಾಪಕೇತರರ ಮಾಹಿತಿಯನ್ನು ಸುಮಾರು 06 ತಿಂಗಳುಗಳಿಂದ ಕೇಳುತ್ತಿದ್ದೇನೆ ಎಂದು ತಿಳಿಸಿದರು.<br><br>ಇದಕ್ಕೆ ಉತ್ತರವಾಗಿ ಮಾನ್ಯ ಕುಲಪತಿಗಳು ಸದರಿಯವರ ಮಾಹಿತಿಯನ್ನು ಒಂದು ತಿಂಗಳಲ್ಲಿ ನೀಡುವುದಾಗಿ ತಿಳಿಸಿದರು. |
| 3 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಬಾರಿ ಇಂಜನಿಯರಿಂಗ್ ಕಾಲೇಜು ಪ್ರಾರಂಭ ಮಾಡಲಾಗಿದೆ, ಪ್ರಸಕ್ತ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, 170 ಅರ್ಜಿಗಳು ಬಂದಿದ್ದು, ಇವುಗಳಲ್ಲಿ 50 ಅರ್ಜಿಗಳು/ಅಭ್ಯರ್ಥಿಗಳು ಮಾತ್ರ ಅರ್ಹತೆ ಪಡೆದಿರುತ್ತಾರೆ, ಥಿಯರಿ ತರಗತಿಗಳು ಪ್ರಾರಂಭವಾಗಿದೆ ಪ್ರಾಕ್ಟಿಕಲ್ ತರಗತಿಗಳು ಮಾಡಬೇಕು, ಅತಿಥಿ ಉಪನ್ಯಾಸಕರುಗಳನ್ನು ತೆಗೆದುಕೊಳ್ಳಲು ಸರ್ಕಾರ ಅನುಮತಿ ನೀಡಿದೆ ಈಗ 16 ಅತಿಥಿ ಉಪನ್ಯಾಸಕರುಗಳನ್ನು ನೇಮಿಸಲಾಗಿದೆ. 03 ಪ್ರಯೋಗಾಲಯ ಮಾರ್ಗದರ್ಶಕರು ಕಾರ್ಯನಿರ್ವಹಿಸುತ್ತಿದ್ದಾರೆ ಈ ಬಗ್ಗೆ ಸ್ಟ್ಯಾಚ್ಯೂಟ್ ಅನುಮೋದನೆಗೆ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು. |

| | |
|---|---|
| 4 | ಡಾ.ಕೆ.ವಿ.ಸುರೇಶ್ ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ಯಾರಮೆಡಿಕಲ್ ಕೋರ್ಸ್‌ನ್ನು ಪ್ರಾರಂಭ ಮಾಡಬೇಕೆಂದು ತಿಳಿಸಿದರು.<br>ಇದಕ್ಕೆ ಉತ್ತರವಾಗಿ ಮಾನ್ಯ ಕುಲಪತಿಗಳು ಇದರ ಕುರಿತು ಸರ್ಕಾರಕ್ಕೆ ಪತ್ರ ಬರೆದಿರುತ್ತೇನೆ ಉನ್ನತ ಶಿಕ್ಷಣ ಮಂತ್ರಿಗಳು ಸಹ ಇದಕ್ಕೆ ಒಲವು ವ್ಯಕ್ತಪಡಿಸಿದ್ದಾರೆ ಎಂದು ಸಭೆಗೆ ತಿಳಿಸಿದರು. |
| 5 | ಶ್ರೀ.ಎಸ್.ಡಿ ದೊಡ್ಡಚಾರಿ ಹಾಗೂ ಡಾ.ಎಂ.ಎಸ್.ದಾಮೋಧರ ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕೇತರ ನೌಕರರು ಪದೋನ್ನತಿ ಹೊಂದಿದರೂ ಅದೇ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೂ 03 ವರ್ಷಕ್ಕಿಂತ ಹೆಚ್ಚು ಅವಧಿ ಒಂದೇ ವಿಭಾಗ/ಕಛೇರಿ/ಕೇಂದ್ರದಲ್ಲಿ ಸೇವೆಯಲ್ಲಿರುವವರನ್ನು ವರ್ಗಾವಣೆ ಮಾಡಬೇಕಾಗಿ ಕೋರಿದರೂ ಮಾಡಿರುವುದಿಲ್ಲವೆಂದು ತಿಳಿಸಿದರು.<br><br>ಇದಕ್ಕೆ ಮಾನ್ಯ ಕುಲಪತಿಗಳು ಸದರಿ ವಿಷಯದ ಬಗ್ಗೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. |
| 6 | ಡಾ.ವೆಂಕಟೇಶಯ್ಯ, ಪ್ರಾಂಶುಪಾಲರು, ಶ್ರೀ.ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರು ಮಾತನಾಡಿ, ಎಂ.ಕಾಂ ಕೋರ್ಸ್‌ನ್ನು ಪ್ರಾರಂಭಿಸಲು ಕಳೆದ 03 ವರ್ಷಗಳಿಂದ ಸಂಯೋಜನೆ (Affiliation) ಕೇಳುತ್ತಿದ್ದೇವೆ ಹಾಗೂ ಈಗಿರುವ 30 ಸೀಟುಗಳ ಜೊತೆಗೆ ಹೆಚ್ಚುವರಿಯಾಗಿ 15 ಸೀಟುಗಳನ್ನು ಮಂಜೂರು ಮಾಡಲು ಕೋರುತ್ತಿದ್ದೇವೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಇದಕ್ಕೆ ಸಮಿತಿ ರಚಿಸಬೇಕಾಗುತ್ತದೆ, ಸಮಿತಿ ಒಪ್ಪಿಗೆ ನೀಡಿದರೆ ನಾವು ಸಂಯೋಜನೆ ನೀಡಲು ಅಭ್ಯಂತರವಿಲ್ಲ ಹಾಗೂ ಹೆಚ್ಚುವರಿ ಸೀಟುಗಳು ಬೇಕಾದಲ್ಲಿ ನಿಯಮಾನುಸಾರ ಈ ಪ್ರಸಕ್ತ ಸಾಲಿನಲ್ಲಿ ಕೋರಲು ತಿಳಿಸಿದರು. |
| 7 | ಶ್ರೀ.ಎಂ.ಬಿ.ಗಪ್ಪಣ್ಣ ರವರು ಮಾತನಾಡಿ, ಶ್ರೀ ಅಭಿಜಿತ್, ಅತಿಥಿ ಉಪನ್ಯಾಸಕರು, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ರವರ ಸಮಸ್ಯೆಯನ್ನು ಪ್ರಸ್ತಾಪಿಸಿದರು.<br>ಇದರ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀ ಅಭಿಜಿತ್, ಅತಿಥಿ ಉಪನ್ಯಾಸಕರು, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ರವರು ವಿನಾಃ ಕಾರಣ ಮಾಧ್ಯಮದ ಮುಂದೆ ಕುಲಪತಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಹೇಳಿಕೆ ನೀಡುತ್ತಿದ್ದಾರೆ ಇವರು ಹೀಗೆ ಮುಂದುವರೆಸಿದರೆ ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. |
| 8 | ಡಾ. ಚೈತ್ರ ನಾರಾಯಣರವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳು (ಪ್ರವೇಶಾತಿ ಶುಲ್ಕ, ಘಟಿಕೋತ್ಸವ ಶುಲ್ಕ, ಪರೀಕ್ಷಾ ಶುಲ್ಕ) ಎಲ್ಲಾ ರೀತಿಯ ಶುಲ್ಕಗಳನ್ನು ಪಾವತಿಸಲು ಸಾಲುಗಟ್ಟಲೆ ಸರದಿಯಲ್ಲಿ ನಿಂತಿರುತ್ತಾರೆ, ವಿದ್ಯಾರ್ಥಿಗಳು ಪಾವತಿಸುವ ಎಲ್ಲಾ ರೀತಿಯ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ಪಾವತಿ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಆನ್‌ಲೈನ್ ಮುಖಾಂತರ ಪ್ರವೇಶಾತಿ ಶುಲ್ಕ ಪಾವತಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು ಸರ್ವರ್ ಸಮಸ್ಯೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುತ್ತದೆ, ನಮ್ಮ ಆವರಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕರನ್ನು ಕರೆಸಿ ಈ ಬಗ್ಗೆ ಹೆಚ್ಚಿನ ಕಾಳಜಿವಹಿಸಲು ತಿಳಿಸಲಾಗುವುದು ಎಂದು ತಿಳಿಸಿದರು. |
| 9 | ಶ್ರೀ.ಎಸ್.ಡಿ.ದೊಡ್ಡಚಾರಿಯವರು ಮತ್ತು ಡಾ.ಎಂ.ಎಸ್.ದಾಮೋದರ್‌ರವರು ಮಾತನಾಡಿ, ಮಾನಸಗಂಗೋತ್ರಿಯ ಆವರಣದ ಮಳಿಗೆಗಳಲ್ಲಿ ಸಿಗರೇಟ್, ಗಾಂಜಾಗಳಂತಹ ಮಾದಕ ವಸ್ತುಗಳು ಮಾರಾಟವಾಗುತ್ತಿರುವುದು ಗಮನಕ್ಕೆ ಬಂದಿದ್ದು, ಮಾನ್ಯ ಕುಲಪತಿಗಳು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು. |

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, ಮಾನಸಗಂಗೋತ್ರಿಯ ಆವರಣದ ಮಳಿಗೆಗಳಲ್ಲಿ ಸಿಗರೇಟ್, ಗಾಂಜಾಗಳಂತಹ ಮಾದಕ ವಸ್ತುಗಳು ಮಾರಾಟ ಮಾಡುತ್ತಿರುವುದು ಕಂಡುಬಂದಲ್ಲಿ ಅಂತಹ ಮಳಿಗೆಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.<br><br>ಮಾನಸಗಂಗೋತ್ರಿಯ ಆವರಣದ ಅಂಗಡಿ ಮಳಿಗೆಗಳಲ್ಲಿ ಸಿಗರೇಟ್, ಗಾಂಜಾಗಳಂತಹ ಮಾದಕ ವಸ್ತುಗಳನ್ನು ಮಾರಾಟ ಮಾಡಬಾರದೆಂದು ಆದೇಶಿಸಿ, ಈ ಸಂಬಂಧ ಒಂದು ಸುತ್ತೋಲೆಯನ್ನು ಹೊರಡಿಸಲಾಗುವುದೆಂದು ಮಾನ್ಯ ಕುಲಸಚಿವರು ತಿಳಿಸಿದರು. |
| 10 | ಸಿಂಡಿಕೇಟ್ ಸದಸ್ಯರನ್ನು ಸಹ ತಾಂತ್ರಿಕ ಸಮಿತಿ ಸಭೆಗೆ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಶ್ರೀ.ಎಸ್.ಡಿ.ದೊಡ್ಡಚಾರಿಯವರು ಮನವಿ ಮಾಡಿಕೊಂಡರು. |
| 11 | ಶ್ರೀಮತಿ ಪವಿತ್ರ ವೈ.ಕೆ ರವರು ಮಾತನಾಡಿ, ಸಂಯೋಜನೆಗೆ ಸಂಬಂಧಿಸಿದಂತೆ ಸ್ವಾಯತ್ತ ಕಾಲೇಜುಗಳಲ್ಲಿ Governing Council Meeting ಗಳು ಎಷ್ಟು ಜರುಗಿದೆ ಎಂಬ ಮಾಹಿತಿ ಹಾಗೂ ನಡವಳಿಗಳನ್ನು ಲಗತ್ತಿಸಿ ಸದಸ್ಯರಿಗೆ ನೀಡಬೇಕೆಂದು ಕೋರಿದರು.<br><br>ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಿಗೆ ಸದರಿ ವಿಷಯದ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಗುವುದು ಎಂದು ತಿಳಿಸಿದರು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು